ಜೆಎಸ್ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 12-08-2017

ಪ್ರಕಟಣೆ ಕೃಪೆಗಾಗಿ

**ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ‘‘ರಾಷ್ಟ್ರೀಯ ಗ್ರಂಥಪಾಲಕರ’’ ದಿನಾಚರಣೆ**

**ಆಧುನಿಕ ತಂತ್ರಜ್ಞಾನಗಳ ಪರಿಣಾಮಕಾರಿ ಬಳಕೆಯಾಗಬೇಕು – ಶ್ರೀ ವಿಷಕಂಠಮೂರ್ತಿ**

ಕೊಳ್ಳೇಗಾಲ 12-08-2017 : ಇಂದು ಮಾಹಿತಿ, ಸಂವಹನ ಜಾಲ, ತಂತ್ರಜ್ಞಾನಗಳ ಬಳಕೆ ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಪಕವಾಗಿ ನಡೆಯಬೇಕು ಎಂದು ಕೊಳ್ಳೇಗಾಲದ ಜೆಎಸ್ಎಸ್ ಶುಶ್ರೂಷ ಶಾಲೆಯ ಪ್ರಾಚಾರ್ಯ ಶ್ರೀ ವಿಷಕಂಠಮೂರ್ತಿ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್ಎಸ್ ಮಹಿಳಾ ಕಾಲೇಜಿನ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದ ವತಿಯಿಂದ ‘‘ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ’’ಯ ಅಂಗವಾಗಿ ಆಯೋಜಿಸಿದ್ದ ‘‘ವಿಶೇಷ ಉಪನ್ಯಾಸ ಹಾಗೂ ಪುಸ್ತಕ ಪ್ರದರ್ಶನ’’ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಾಹಿತಿ ಹಾಗೂ ಸಂಪರ್ಕ ಜಾಲದ ವೃದ್ಧಿ ಬಹಳ ಮಹತ್ವ ಪಡೆದುಕೊಂಡಿದೆ. ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಮತ್ತು ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಮೂಲ ಸೌಲಭ್ಯಗಳು ಕಾಲೇಜುಗಳಲ್ಲಿ ಸಿಗುವಂತಾಗಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳು ಈ ವಿಷಯದಲ್ಲಿ ಸದಾ ಮುಂದೆ ಎನ್ನುವುದು ಸತ್ಯ. ಸರಕಾರಿ ಕಾಲೇಜುಗಳಲ್ಲಿಯೂ ವ್ಯವಸ್ಥೆಗಳಾಗಬೇಕು ಹಾಗಾದಲ್ಲಿ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶ ದೊರೆಯುತ್ತದೆ ಎಂದು ತಿಳಿಸಿದರು.






JSSCWK 35

